## ಮುಕ್ಕಾಗಿರುವ ಸಂವೇದನೆಗಳು

ಇತಿಹಾಸದಲ್ಲಿ ಈ ರೀತಿಯ ಪರಿಸ್ಥಿತಿ ಎದುರಾಗಿರುವ ಉದಾಹರಣೆಗಳು ಇದ್ದಂತಿಲ್ಲ. ವರ್ತಮಾನದ ವಿದ್ಯಮಾನಗಳನ್ನು ನೋಡಿದರೆ, ಈ ಪರಿಸ್ಥಿತಿಯ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯ ಗ್ರಹಿಕೆಯನ್ನು ಹೊಂದಿದ್ದಾರೆ. ತಂದೆ ತಾಯಿಯ ಬಗ್ಗೆ ಮಕ್ಕಳ ವರ್ತನೆಯು ಹೀಗೇಕೆ ಇರುತ್ತದೆ ಎಂಬುದಕ್ಕೆ, 'ಅವರನ್ನು ಸರಿಯಾಗಿ ಬೆಳೆಸಿಲ್ಲ' ಎಂಬ ಕಪ್ಪುಬಿಳುಪಿನ ನಿರ್ಧಾರ ಮಾಡುವುದು ಸರಿಯಲ್ಲ. ಮನುಷ್ಯನೊಳಗಿನ ಸಂವೇದನಾಶೀಲತೆಯ ಮೇಲೆ ಏನೆಲ್ಲಾ ಅಂಶಗಳು ಪ್ರಭಾವಗಳು ಬೀರಿವೆ ಎಂಬುದನ್ನು ಗಮನಿಸಬೇಕು. ಹಿಂದೆಲ್ಲ ಒಂದು ಕುಟುಂಬದಲ್ಲಿ ಹುಟ್ಟು ಸಾವು, ಮದುವೆ ಮುಂಜಿ ಎಂಬ ಘಟನೆಗಳಿಗೆ ಎಷ್ಟೊಂದು ಮಹತ್ವ ಇರುತ್ತಿತ್ತು. ಒಂದು 'ಸಾವು' ಬಹಳವೇ ಬಾಧಿಸುತ್ತಿತ್ತು. ಹುಟ್ಟಿನ ಸಂಭ್ರಮವನ್ನು ಕುಟುಂಬಿಕರೆಲ್ಲರೂ ಸೇರಿ ಆಚರಿಸುತ್ತಿದ್ದರು. ಮದುವೆ ಮುಂಜಿಗಳಲ್ಲಿ ಕೌಟುಂಬಿಕ ಸಹಭಾಗಿತ್ವ ಇರುತ್ತಿತ್ತು. ಆದರೆ ಇಂದು ದಿನ ಬೆಳಗಾದರೆ, ಹುಟ್ಟಿನ ಸುದ್ದಿ, ಮದುವೆ ಶುಭಾಶಯಗಳು, ಸಾವಿನ ಸುದ್ದಿಗಳು... ಎಲ್ಲವೂ ದೊಡ್ಡ ಸದ್ದಿನೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಕಿವಿಗೆ ಬೀಳುತ್ತಲೇ ಇರುತ್ತವೆ. ಪಡೆದುಕೊಳ್ಳುವ ಹಾಗೂ ಕಳೆದುಕೊಳ್ಳುವ ಕುರಿತ ಸೂಕ್ಷ್ಮತೆಯೇ ಒರಟಾಗಿಬಿಟ್ಟಿದೆ. ಹಾಗಾಗಿ ಸಂಬಂಧಗಳ ಭವ್ಯತೆ, ತೀವ್ರತೆಗಳೆಲ್ಲ ಕಡಿಮೆಯಾಗುವುದು ಸಹಜ. ಹೀಗೆ ನೂರಾರು ಅಂಶಗಳು ಅರಿವಿಲ್ಲದೆ ನಮ್ಮ ಸಂಬಂಧಗಳ ಮೇಲೆ ಪ್ರಭಾವ ಬೀರುತ್ತಿರುತ್ತವೆ. ಸಂಬಂಧಗಳ ನಡುವೆ ನಿಷ್ಠೆಯೂ ಬದಲಾಗುತ್ತಿದೆ. ಆದ್ಯತೆಗಳು ಬದಲಾಗುತ್ತಿವೆ. ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಜನಸಂಖ್ಯೆಯ, ವಿಸ್ತಾರವಾದ ಪ್ರಜಾಪ್ರಭುತ್ವದ ಮತ್ತು ಇಂತಹ ಆರ್ಥಿಕತೆಯನ್ನು ಹೊಂದಿದ್ದ ದೇಶದ ಅಥವಾ ಸಮುದಾಯದ ಉದಾಹರಣೆ ಸಿಗುವುದಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಕೃಷಿಯೇತರ ಕ್ಷೇತ್ರದಲ್ಲಿ ದುಡಿಯುತ್ತಿದ್ದ ಉದಾಹರಣೆಯೂ ಸಿಗದು. ಆದ್ದರಿಂದಈ ಎಲ್ಲ ಘಟನೆಗಳನ್ನು ನಾನು ಪ್ರಶ್ನಾರ್ಥಕ ಚಿಹ್ನೆಯೊಂದಿಗೇ ಗಮನಿಸುತ್ತಿದ್ದೇನೆ.

**-ರವಿಕೃಷ್ಣಾ ರೆಡ್ಡಿ**
ಅಧ್ಯಕ್ಷರು, ಕರ್ನಾಟಕ ರಾಷ್ಟ್ರ ಸಮಿತಿ



ಮಕ್ಕಳ ಲೋಕದಲ್ಲಿ ಎಚ್ಚರಗೊಳ್ಳುವ ಆನಂದದ ದಿವ್ಯ ಶಿಶು

ಸಮಯದಲ್ಲಿ ಮನೆಯವರೆಲ್ಲರೂ ಮನೆಯೊಳಗೇ ಇರುವುದರಿಂದ, ಹಿರಿಯ ನಾಗರಿಕರಿಗೆ ಹಿಂದೆ ಸಿಗುತ್ತಿದ್ದ ಮುಕ್ತತೆ, ತುಸು ನಿರಾಳವಾಗುವ ಅವಕಾಶ ಈಗ ಸಿಗುತ್ತಿಲ್ಲ. ಒಂದೇ ಬೆಡ್ ರೂಮ್ ಇರುವ ಮನೆಗಳಲ್ಲಿ ಹಿರಿಯರಿಗೆ ಜಾಗವೇ ಇಲ್ಲವಾಗಿದೆ. ಅವರು ಚಾವಡಿಯ ಮೂಲೆಯಲ್ಲಿ, ಅಡುಗೆಮನೆಯಲ್ಲಿ ಡಬ್ಬಗಳನ್ನು ಸರಿಸಿ ಮಲಗಿ ರಾತ್ರಿ ಕಳೆಯಬೇಕಾತ್ತದೆ. ಮನೆಯಿಂದ ಹೊರಗೆ ಸುತ್ತಾಡಿಕೊಂಡು ಬರೋಣಬವೆಂದರೆ 'ವಾಕಿಂಗ್' ಹೋಗುವ ಅವಕಾಶವಿಲ್ಲ. ವಾಕಿಂಗ್ ನೆಪದಲ್ಲಿ ಸ್ನೇಹವಲಯದೊಡನೆ ಕಷ್ಟ ಸುಖ ಹಂಚಿಕೊಂಡು ಹಗುರಾಗುವ ಅವಕಾಶವೂ ಇಲ್ಲವಾಗಿದೆ. ಕೆಳಮಧ್ಯಮ ವರ್ಗದಲ್ಲಿ ಎಷ್ಟೋ ಮಂದಿ ಹಿರಿಯರು ತಮ್ಮ ಊರಿಗೆ ಹೋಗಿದ್ದಾರೆ. ಅಲ್ಲೊಂದು ತುಂಡು ಜಮೀನಿದ್ದವರು ಹೇಗೋ ನಿಭಾಯಿಸುವರೇನೋ. ಏನೂ ಇಲ್ಲದವರು ಹಳ್ಳಿಗಳಲ್ಲಿಯೂ ಕಷ್ಟಪಡಬೇಕಾಗುತ್ತದೆ'.

ಆತಂಕದ ಸಂದರ್ಭದಲ್ಲಿ ಮಕ್ಕಳು ಕೂಡ ಮನೆಯಲ್ಲಿ ಹಿರಿಯರ ಮೇಲೆ ರೇಗುತ್ತಾರೆ. 'ಕೆಲಸದ ನಡುವೆ ನಿಮ್ದೇನು ಕಿರಿಕಿರಿ, ಸುಮ್ಮನೇ ಒಂದ್ಕಡೆ ಇರಬಾರದಾ' ಎಂದು ಗದರಿಬಿಡುತ್ತಾರೆ. ಅಂತಹ ಸಂದರ್ಭದಲ್ಲಿ ಎದೆಯಲ್ಲಿ ಅವಿತಿರುವ ಆತಂಕವನ್ನು ಹೇಳಿ ಹಗುರಾಗುವುದಾದರೂ ಹೇಗೆ? ಯಾರ ಬಳಿ ಮಾತನಾಡುವುದು? ಹಿರಿಯರ ಪಾಲಿಗೆ ಮಾತು ದುಬಾರಿಯಾಗಿದೆ.

### ಬರಿಗೈಯಾಗುತ್ತಿರುವ ಅಳುಕು

ಲಿಡ್ವಿನ್ ಲೋಬೊ ಅವರು ಗಮನಿಸಿರುವ ಮತ್ತೊಂದು ಸಂಗತಿ ಹೀಗಿದೆ. 'ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಗಳಲ್ಲಿ ಹಿರಿಯರ ನಾಗರಿಕರ ಬಳಿ ಒಂದಿಷ್ಟು ಡೆಪಾಸಿಟ್ ಹಣ ಇರುತ್ತದೆ. ಹಿಂದೆಲ್ಲ, ಆ ಠೇವಣಿಯಿಂದ ಜೀವನ ನಡೆಸಲು, ಸ್ವಂತ ಖರ್ಚಿಗೆ ಸಾಕಾಗುವಷ್ಟು ಬಡ್ಡಿ ಹಣ ಅವರಿಗೆ ಬರುತ್ತಿತ್ತು. ಈಗ ಪರಿಸ್ಥಿತಿ ಹಾಗಿಲ್ಲ. ಬಡ್ಡಿಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತಿದೆ. ಕಳೆದ ವರ್ಷದ ಲಾಕ್‌ಡೌನ್ ನಂತರ, ದುಡಿಯುವ ಮಕ್ಕಳೂ ಹಣಕಾಸಿನ ಮುಗ್ಗಟ್ಟಿನ ಬಗ್ಗೆ ಮನೆಯಲ್ಲಿ ಚರ್ಚಿಸುತ್ತಿರುತ್ತಾರೆ. 'ಒಂಚೂರು ಹಣ ಬೇಕಿತ್ತು' ಎಂದು ಮಗನ ಬಳಿಯೋ ಮಗಳ ಬಳಿಯೋ ಕೇಳುವ ಮಾತು ಪಕ್ಕಕ್ಕಿರಲಿ, 'ನಾನಿರುವುದೇ ಭಾರವಾಗಿದೆಯೇನೋ' ಎಂಬ ಅನಿಸಿಕೆ ಕೆಲವು ಹಿರಿಯರ ಮನಸ್ಸಿನಲ್ಲಿ ಮೂಡುತ್ತದೆ. ಅದು ಖಿನ್ನತೆಯನ್ನು ಮತ್ತಷ್ಟು ಹೆಚ್ಚು ಮಾಡುತ್ತದೆ'.

ಕಾಲ ಸರಿದಂತೆ, ಹಿರಿಯರ ಕುರಿತು ಯುವಜನತೆಯ ಧೋರಣೆ ಬದಲಾಗುತ್ತಲೇ ಇದೆ ಎಂಬುದನ್ನು ಲಿಡ್ವಿನ್ ಲೋಬೊ ಕೂಡ ಗುರುತಿಸುತ್ತಾರೆ. ಸಾಮಾಜಿಕ ಕಾರ್ಯದತ್ತ ಮುಖ ಮಾಡಿದ ಯುವಜನತೆ ಕೂಡ, ಸೂಚಿಸಿದ ಕೆಲಸಗಳಿಗಷ್ಟೇ ಸೀಮಿತವೆಂಬಂತೆ ಕೆಲಸ ಮಾಡುತ್ತಾರೆ. 'ಪೋಸ್ಟ್ ಆಫೀಸು ತೆರೆದಿದೆಯೇ?' ಎನ್ನುವ ಕರೆ ಬರುತ್ತದೆ ಎಂದುಕೊಳ್ಳಿ. ಅದಕ್ಕೆ ಉತ್ತರಿಸಿ ಫೋನ್ ಇರಿಸುವುದು ಕರ್ತವ್ಯ ನಿರ್ವಹಣೆಯಷ್ಟೇ. ಆದರೆ ಅದೇ ಮಾತು ಮುಂದುವರೆಸಿ, 'ಪೋಸ್ಟ್ ಆಫೀಸ್‌ಗೆ ಯಾಕೆ ಹೋಗಬೇಕು? ಮನೆಯಲ್ಲಿ ಯಾರೆಲ್ಲ ಇದ್ದೀರಿ? ನಿಮ್ಮದು ಊಟ ಆಯಿತಾ? ಆರೋಗ್ಯ ಹೇಗಿದೆ?' ಎಂಬ ಮಾತುಗಳು ಹಿರಿಯರ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸುತ್ತವೆ. ಎಷ್ಟೋವೇಳೆ ಸಾಂತ್ವನಕ್ಕಿಂತ ದೊಡ್ಡ ಚಿಕಿತ್ಸೆ ಬೇರೇನೂ ಇರುವುದಿಲ್ಲ. ಆದರೆ ಹೀಗೆ 'ಪಟ್ಟಾಂಗ' ಮಾಡುವುದು ಸರಿಯಲ್ಲ ಎಂಬ ಭಾವವೇ ಈಗಿನ ತಲೆಮಾರಿನ ಮಕ್ಕಳ ಮನಸ್ಸಿನಲ್ಲಿದೆ.

### ಕವಲೊಡೆದಿದೆ ದಾರಿ

ಈಗಿನ ತಲೆಮಾರಿನವರು 'ತಾವಾಯಿತು,